## ಬೆಂಗಳೂರು ಮಹಾನಗರ ಪಾಲಿಕೆ

## ಆಯುಕ್ತರವರ ಕಛೇರಿ, ನರಸಿಂಹರಾಜ ಚೌಕ, ಬೆಂಗಳೂರು 560002

ಸಂಖ್ಯೆ: ಆ/ಪಿಎಸ್ಆರ್/P- 219 /2015-16 ದಿನಾಂಕ: 17-12-2015

## ಸುತ್ತೋಲೆ- 4


**ವಿಷಯ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಬ್ಲಾಕ್ ಸ್ಪಾಟ್ಸ್‌ಗಳನ್ನು ನಿರ್ಮೂಲನೆ ಮಾಡುವ ಕುರಿತು**

***

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಎಲ್ಲಾ ವಾರ್ಡ್‌ಗಳಲ್ಲಿ ಸರಿಯಾಗಿ ಘನತ್ಯಾಜ್ಯ ನಿರ್ವಹಣೆಯಾಗದೇ ಬ್ಲಾಕ್ ಸ್ಪಾಟ್ಸ್ ಸೃಷ್ಟಿಯಾಗಿರುತ್ತವೆ. ಸದರಿ ಬ್ಲಾಕ್ ಸ್ಪಾಟ್ಸ್‌ಗಳು ನಗರ ಸೌಂಧರ್ಯವನ್ನು ಹಾಳು ಮಾಡುವುದಲ್ಲದೇ ಪಾಲಿಕೆಗೆ ಕೆಟ್ಟ ಹೆಸರು ಕೂಡ ತಂದಿರುತ್ತವೆ.

ಘನತ್ಯಾಜ್ಯ ನಿರ್ವಹಣೆಯ ನಿಯಮ 2000ರ ಅನ್ವಯ ಘನತ್ಯಾಜ್ಯವು ನೆಲದ ಮೇಲೆ ಬೀಳದ ಹಾಗೆ ನಿರ್ವಹಣೆ ಮಾಡುವುದು ಕರ್ತವ್ಯವಾಗಿರುತ್ತದೆ ಆದರೂ ಸಹ ಪಾಲಿಕೆಯ ಎಲ್ಲಾ ವಾರ್ಡ್‌ಗಳಲ್ಲಿ ಕನಿಷ್ಠ 5 ರಿಂದ 10 ಬ್ಲಾಕ್ ಸ್ಪಾಟ್ಸ್‌ಗಳು ಸೃಷ್ಟಿಯಾಗಿರುತ್ತವೆ. ಈ ಸಂಬಂಧ ಸದರಿ ಬ್ಲಾಕ್ ಸ್ಪಾಟ್ಸ್‌ಗಳನ್ನು ನಿರ್ಮೂಲನೆ ಮಾಡುವ ನಿಟ್ಟಿನಲ್ಲಿ ತಮ್ಮ ತಮ್ಮ ವಲಯಗಳಲ್ಲಿರುವ ಬ್ಲಾಕ್ ಸ್ಪಾಟ್ಸ್‌ಗಳನ್ನು ಗುರುತಿಸಿ ಆ ಪ್ರದೇಶವನ್ನು ಸ್ವಚ್ಛಗೊಳಿಸಿ ನಂತರ ಯಾವುದೇ ತ್ಯಾಜ್ಯ ಬೀಳದಂತೆ ಸದರಿ ಪ್ರದೇಶಗಳಲ್ಲಿ ನಾಮ ಫಲಕಗಳನ್ನು ಅಳವಡಿಸುವುದು ಅಥವಾ ಸದರಿ ಬ್ಲಾಕ್ ಸ್ಪಾಟ್ಸ್‌ಗಳ ಬಳಿ ಗೋಡೆಗಳಿದ್ದರೆ, ಅದರ ಮೇಲೆ ಬಣ್ಣದಲ್ಲಿ ಬರೆಸುವುದು.

ಎಲ್ಲಾ ವಲಯಗಳಲ್ಲಿ ಏಕ ರೂಪದಲ್ಲಿ ನಾಮ ಫಲಕಗಳನ್ನು ಅಳವಡಿಸಲು, ಬ್ಲಾಕ್ ಸ್ಪಾಟ್ಸ್ ಪ್ರದೇಶದ ಅನುಗುಣವಾಗಿ **6*4 ಅಥವಾ 3*2 ಅಡಿಯ ಹಸಿರು ಬಣ್ಣದ ಮೇಲೆ ಕೆಂಪು** ಬಣ್ಣದಲ್ಲಿ ಕೆಳಕಂಡಂತೆ ಬರೆಯಿಸಿ ಅಳವಡಿಸಿಕೊಳ್ಳುವುದು.




ಹಾಗೂ ಸದರಿ ಬ್ಲಾಕ್ ಸ್ಪಾಟ್ಸ್‌ಗಳ ಪ್ರದೇಶಗಳಲ್ಲಿ ಇನ್ನೂ ಮುಂದೆ ಕಸ ಹಾಕಿದವರಿಗೆ ಕರ್ನಾಟಕ ಮುನ್ಸಿಪಲ್ ಕಾರ್ಪೋರೇಷನ್ ತಿದ್ದುಪಡಿ ಕಾಯ್ದೆ 2013 ರ ರೀತ್ಯಾ ದಂಡ ವಿಧಿಸುವುದು. ಸದರಿ ಕಾರ್ಯವನ್ನು ಕಾಲಾಬದ್ಧ ಮಿತಿಯೊಳಗೆ ನಿರ್ವಹಿಸಲು ಯೋಜನೆ ರೂಪಿಸಿ ತಮ್ಮ ವಲಯಗಳಲ್ಲಿನ ಬ್ಲಾಕ್ ಸ್ಪಾಟ್ಸ್‌ಗಳನ್ನು ನಿರ್ಮೂಲನೆ ಮಾಡುವಂತೆ ಕ್ರಮವಹಿಸಲು ಆದೇಶಿಸಿದೆ.

17.12.15

ವಿಶೇಷ ಆಯುಕ್ತರು (ಆ & ಘ.ತ್ಯಾ.ನಿ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಪು.ತಿ.ನೋ**

**ರವರಿಗೆ,**

ಎಲ್ಲಾ ವಲಯದ ಅಪರ/ಜಂಟಿ ಆಯುಕ್ತರು, ಮುಖ್ಯ ಅಭಿಯಂತರರು ಮತ್ತು ಅಧೀಕ್ಷಕ ಅಭಿಯಂತರರು ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.

**ಪ್ರತಿಯನ್ನು,**

- ಮಾಜ್ಯ ಮಹಾಪೌರರ ಗಮನಕ್ಕೆ ತರಲು ಮಹಾಪೌರರ ಆಪ್ತ ಕಾರ್ಯಾಲಯಕ್ಕೆ ಕಳುಹಿಸಲಾಗಿದೆ.
- ಉಪಮಹಾಪೌರರ ಗಮನಕ್ಕೆ ತರಲು ಉಪಮಹಾಪೌರರ ಆಪ್ತ ಕಾರ್ಯಾಲಯಕ್ಕೆ ಕಳುಹಿಸಲಾಗಿದೆ.
- ಕಛೇರಿ ಪ್ರತಿ.